# ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.

ಆಡಳಿತ ಕಛೇರಿ, #323/5ಎಫ್&5ಜಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-01. ದೂರವಾಣಿ ಸಂಖ್ಯೆ: 08192-256107

**ಅರ್ಹ ಅಭ್ಯರ್ಥಿಗಳಿಂದ 'ಪ್ರಧಾನ ವ್ಯವಸ್ಥಾಪಕರ' ಮತ್ತು 'ಶಾಖಾ ವ್ಯವಸ್ಥಾಪಕರ' ಹುದ್ದೆಗಳಿಗೆ ಅರ್ಜಿ ಅಹ್ವಾನಿಸಲಾಗಿದೆ.**

| | | |
|---|---|---|
| 1 | ಹುದ್ದೆಗಳ ಸಂಖ್ಯೆ: | 1) ಪ್ರಧಾನ ವ್ಯವಸ್ಥಾಪಕರ ಹುದ್ದೆ – 01 (ಒಂದು)<br>2) ಶಾಖಾ ವ್ಯವಸ್ಥಾಪಕರ ಹುದ್ದೆ – 04 (ನಾಲ್ಕು) |
| 2 | ಹುದ್ದೆಗಳ ವರ್ಗ | ಸಾಮಾನ್ಯ ಹುದ್ದೆಗಳು |
| 3 | ವಿದ್ಯಾರ್ಹತೆ ಮತ್ತು ಆದ್ಯತೆ: | **1)ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ:** ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯಲ್ಲಿ ಕಡ್ಡಾಯವಾಗಿ ಶೇ.50ಕ್ಕಿಂತ ಹೆಚ್ಚು ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು ಹಾಗೂ ವಾಣಿಜ್ಯ ಅಥವಾ ಅರ್ಥ ಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರಿಗೆ ಆದ್ಯತೆ ನೀಡಲಾಗುವುದು.<br>**ಎ)**ಯಾವುದೇ ಬ್ಯಾಂಕುಗಳಲ್ಲಿ ಕನಿಷ್ಠ 8 ವರ್ಷಗಳ ಕಾಲ ಕಡ್ಡಾಯವಾಗಿ ವ್ಯವಸ್ಥಾಪಕರಾಗಿ ಅಥವಾ ಶಾಖಾ ವ್ಯವಸ್ಥಾಪಕರಾಗಿ ಅಥವಾ 20 ವರ್ಷಗಳ ಕಾಲ ಬ್ಯಾಂಕುಗಳಲ್ಲಿ ವಿವಿಧ **(Middle / Senior Management Level)** ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಅನುಭವವುಳ್ಳವರಾಗಿರತಕ್ಕದ್ದು.<br>**ಬಿ)**ಸಹಕಾರಿ ಕಾಯ್ದೆ ಮತ್ತು ನಿಯಮಗಳನ್ನು **(Act & Rules)** ಹಾಗೂ ಆರ್‌ಬಿಐ ನಿಯಮಗಳು ಮತ್ತು ನಿಬಂಧನೆಗಳು **(Rules & Regulation)** ಬಗ್ಗೆ ಜ್ಞಾನವುಳ್ಳವರಾಗಿರತಕ್ಕದ್ದು.<br>**ಸಿ)**ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಕಂಪ್ಯೂಟರ್ ಜ್ಞಾನ ಹೊಂದಿದವರು.<br>**ಡಿ)**ಡಿಪ್ಲೋಮಾ ಇನ್ ಸೆಕ್ರಟರಿಯಲ್ ಪ್ರಾಕ್ಟೀಸ್ ಅಥವಾ ಡಿಪ್ಲೋಮಾ ಇನ್ ಬ್ಯಾಂಕಿಂಗ್ ಅಥವಾ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಯಾವುದಾದರು ಒಂದರಲ್ಲಿ ತೇರ್ಗಡೆಯಾದವರಿಗೆ ಆದ್ಯತೆ ನೀಡಲಾಗುವುದು.<br>**ಇ)**ಪ್ರಧಾನ ವ್ಯವಸ್ಥಾಪಕರ ಹುದ್ದೆಯನ್ನು 5 ವರ್ಷದ ಅವಧಿಗೆ ನೇರ ನೇಮಕಾತಿ ಮೂಲಕ ನೇಮಿಸಿಕೊಳ್ಳಲಾಗುವುದು. |
| | | **2)ಶಾಖಾ ವ್ಯವಸ್ಥಾಪಕರ ಹುದ್ದೆಗೆ:** ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯಲ್ಲಿ ಕಡ್ಡಾಯವಾಗಿ ಶೇ.50ಕ್ಕಿಂತ ಹೆಚ್ಚು ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು ಹಾಗೂ ವಾಣಿಜ್ಯ ಅಥವಾ ಅರ್ಥ ಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರಿಗೆ ಆದ್ಯತೆ ನೀಡಲಾಗುವುದು.<br>**ಎ)**ಯಾವುದೇ ಬ್ಯಾಂಕುಗಳಲ್ಲಿ ಕನಿಷ್ಠ 5 ವರ್ಷಗಳ ಕಾಲ ಕಡ್ಡಾಯವಾಗಿ ವ್ಯವಸ್ಥಾಪಕರಾಗಿ ಅಥವಾ ಶಾಖಾ ವ್ಯವಸ್ಥಾಪಕರಾಗಿ ಅಥವಾ 10 ವರ್ಷಗಳ ಕಾಲ ಬ್ಯಾಂಕಿನ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಅನುಭವವುಳ್ಳವರಾಗಿರತಕ್ಕದ್ದು.<br>**ಬಿ)**ಸಹಕಾರಿ ಕಾಯ್ದೆ ಮತ್ತು ನಿಯಮಗಳನ್ನು **(Act & Rules)** ಹಾಗೂ ಆರ್‌ಬಿಐ ನಿಯಮಗಳು ಮತ್ತು ನಿಬಂಧನೆಗಳು **(Rules & Regulation)** ಬಗ್ಗೆ ಜ್ಞಾನವುಳ್ಳವರಾಗಿರತಕ್ಕದ್ದು.<br>**ಸಿ)**ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಕಂಪ್ಯೂಟರ್ ಜ್ಞಾನ ಹೊಂದಿದವರು.<br>**ಡಿ)**ಡಿಪ್ಲೋಮಾ ಇನ್ ಸೆಕ್ರಟರಿಯಲ್ ಪ್ರಾಕ್ಟೀಸ್ ಅಥವಾ ಡಿಪ್ಲೋಮಾ ಇನ್ ಬ್ಯಾಂಕಿಂಗ್ ಅಥವಾ ಡಿಪ್ಲೋಮಾ ಇನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಯಾವುದಾದರು ಒಂದರಲ್ಲಿ ತೇರ್ಗಡೆಯಾದವರಿಗೆ ಆದ್ಯತೆ ನೀಡಲಾಗುವುದು. |
| 4 | ವಯೋಮಿತಿ: | **1)** ಮೇಲ್ಕಂಡ ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ ಆರ್‌ಬಿಐ ನಿರ್ದೇಶನ್ವದಯ ಕನಿಷ್ಠ 35ವರ್ಷ ಗರಿಷ್ಠ ವಯೋಮಿತಿ 70ವರ್ಷಗಳ ಒಳಗಿನವರಾಗಿರತಕ್ಕದ್ದು.<br>**2)**ಮೇಲ್ಕಂಡ ಶಾಖಾ ವ್ಯವಸ್ಥಾಪಕರ ಹುದ್ದೆಗೆ ಕನಿಷ್ಠ 18ವರ್ಷ ಗರಿಷ್ಠ ವಯೋಮಿತಿ 35ವರ್ಷಗಳ ಒಳಗಿನವರಾಗಿರತಕ್ಕದ್ದು. |
| 5 | ಅಗತ್ಯ ಅರ್ಹತೆ: | ಅಭ್ಯರ್ಥಿಗಳು ಕಡ್ಡಾಯವಾಗಿ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಬರೆಯಲು, ಓದಲು ಮತ್ತು ಮಾತನಾಡ ಬಲ್ಲವರಾಗಿರಬೇಕು. |

| | |
|---|---|
| 6 | **ಅರ್ಜಿ ವಿತರಣೆ ಮತ್ತು ಸಲ್ಲಿಕೆಯ ಸ್ಥಳ:** ಖುದ್ದಾಗಿ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಅಥವಾ ಬ್ಯಾಂಕಿನ Website ನಲ್ಲಿ ಅರ್ಜಿಯನ್ನು ಪಡೆಯಬಹುದು ಮತ್ತು ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಅಂಚೆ ಅಥವಾ ಖುದ್ದಾಗಿ ಆಡಳಿತ ಕಛೇರಿಯಲ್ಲಿ ಸಲ್ಲಿಸುವುದು. |
| 7 | **ಅರ್ಜಿ ಸಲ್ಲಿಸುವ ಮತ್ತು ಮುಕ್ತಾಯದ ದಿನಾಂಕ:** |

| ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭಿಕ ದಿನಾಂಕ | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ |
|---|---|---|
| **01–04–2025** | **30–04–2025** | **30–04–2025** |

| | |
|---|---|
| 8 | ನಿಗದಿಪಡಿಸಿದ ಅರ್ಜಿ/ ಪರೀಕ್ಷಾ ಶುಲ್ಕ: |

| | ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ | ಶಾಖಾ ವ್ಯವಸ್ಥಾಪಕರ ಹುದ್ದೆಗೆ: |
|---|---|---|
| | ರೂ. 1,000/– | ರೂ. 1,000/– |

**ಅರ್ಜಿ ಶುಲ್ಕ ಪಾವತಿ:** ಅರ್ಜಿ ಶುಲ್ಕವನ್ನು ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ **"ಶಿವ ಸಹಕಾರಿ ಬ್ಯಾಂಕ್ ನಿಯಮಿತ" ದಾವಣಗೆರೆ.** ಇದರ ಹೆಸರಿನಲ್ಲಿ **"ಪೇ-ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್"** ಮೂಲಕ ಸಲ್ಲಿಸಬಹುದು..

| | | |
|---|---|---|
| 9 | ಲಿಖಿತ ಪರೀಕ್ಷೆ ಮತ್ತು ಕರೆ ಪತ್ರಗಳು: | ಲಿಖಿತ ಪರೀಕ್ಷೆಗೆ ಹಾಜರಾಗಲು ಬ್ಯಾಂಕು ತೀರ್ಮಾನಿಸಿದ ಮಾನದಂಡದ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಗೆ ಕರೆ ಪತ್ರಗಳನ್ನು ಕಳುಹಿಸಲಾಗುವುದು. ಸದರಿ ಹುದ್ದೆಯ ಅಭ್ಯರ್ಥಿಗಳು ಕನ್ನಡ, ಆಂಗ್ಲ ಭಾಷೆ, ಸಾಮಾನ್ಯ ಜ್ಞಾನ, ಬ್ಯಾಂಕಿಂಗ್ ಜ್ಞಾನ, ಗಣಿತ ಶಾಸ್ತ್ರ ವಿಷಯಗಳಿಗೆ ಸಂಬಂಧಪಟ್ಟ ಲಿಖಿತ ಪರೀಕ್ಷಯಲ್ಲಿನ ಅವರ ಸಾಧನೆಯ ಆಧಾರದ ಮೇಲೆ ಬ್ಯಾಂಕಿನ ಮಾನದಂಡದಂತೆ ಸಂದರ್ಶನ ಪತ್ರವನ್ನು ಕಳುಹಿಸಲಾಗುವುದು. ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ಅಭ್ಯರ್ಥಿಗಳ ಸಾಧನೆ ಮತ್ತು ಅನುಭವ/ಹೆಚ್ಚುವರಿ ಅದ್ಯತೆಯನ್ನು ಆಧರಿಸಿ ಆಯ್ಕೆ ಮಾಡಲಾಗುವುದು. |
| 10 | ವೇತನ ಶ್ರೇಣಿ: | **1)ಪ್ರಧಾನ ವ್ಯವಸ್ಥಾಪಕರ ಹುದ್ದೆಗೆ:** ಬ್ಯಾಂಕಿನ ನಿಯಮಾನುಸಾರ ನಿಗದಿಗೊಳಿಸಲಾಗುವುದು.<br>**2)ಶಾಖಾ ವ್ಯವಸ್ಥಾಪಕರ ಹುದ್ದೆಗೆ:** ಬ್ಯಾಂಕಿನ ನಿಯಮಾನುಸಾರ ನಿಗದಿಗೊಳಿಸಲಾಗುವುದು. |
| 11 | ಸಾಮಾನ್ಯ ಸೂಚನೆಗಳು: | 1)ಅಂಚೆ ಇಲಾಖೆಯಿಂದ ಅಥವಾ ಇನ್ನಾವುದೇ ರೀತಿಯಲ್ಲಿ ಪತ್ರಗಳು ತಲುಪಲು ತಡವಾದರೆ ಅಥವಾ ತಲುಪದಿದ್ದರೆ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲಾ. 2)ಈಗಾಗಲೇ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ಸಂದರ್ಶನದ ಸಂದರ್ಭದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಸ್ಥೆಯಿಂದ (Employer) ನಿರಪೇಕ್ಷಣಾ ಪತ್ರ ಸಲ್ಲಿಸಬೇಕು. 3)ಲಿಖಿತ ಪರೀಕ್ಷೆ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಹಾಜರಾಗಬೇಕಾಗುತ್ತದೆ. 4)ಅಭ್ಯರ್ಥಿಗಳ ಅರ್ಹತೆ, ಲಿಖಿತ ಪರೀಕ್ಷೆ, ಸಂದರ್ಶನ ಅಥವಾ ಅಭ್ಯರ್ಥಿಗಳ ಆಯ್ಕೆಯ ವಿಚಾರದಲ್ಲಿ ಆಡಳಿತ ಮಂಡಲಿಯ ತೀರ್ಮಾನವೇ ಅಂತಿಮ, ಈ ಕುರಿತು ಪತ್ರ ವ್ಯವಹಾರವನ್ನು ಮಾನ್ಯ ಮಾಡುವುದಿಲ್ಲ. 5) ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ಹಾಲಿ ಅಥವಾ ಮುಂದೆ ಪ್ರಾರಂಭಿಸುವ ಶಾಖೆ/ಕಛೇರಿಯಲ್ಲಿ ಕೆಲಸ ಮಾಡಲು ಸಿದ್ದರಿರಬೇಕು. 6)ಈ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಸುವ ಮೂಲಕ ಆಯ್ಕೆ ಮಾಡಲಾಗುವುದು. 7) ಆಯ್ಕೆಯಾದ ಅಭ್ಯರ್ಥಿಗಳಿಗೆ 24 ತಿಂಗಳವರೆಗೆ ತರಬೇತಿ ಅವಧಿ (ಪ್ರೊಬೆಶನರಿ) ಇರುತ್ತದೆ. 8)ತರಬೇತಿ ಅವಧಿಯನ್ನು ಯಶಸ್ವಿಯಾಗಿ ಪೂರೈಸಿದ ಅಭ್ಯರ್ಥಿಯು ತರಬೇತಿ ಅವಧಿಯನ್ನು ಹೊರತುಪಡಿಸಿ ಕನಿಷ್ಠ 5 ವರ್ಷ ಈ ಬ್ಯಾಂಕಿನ ಸೇವೆ ಸಲ್ಲಿಸುವ ಬಗ್ಗೆ ಕರಾರು ಬರೆದುಕೊಡತಕ್ಕದ್ದು. 9)ಬದಲಾದ ಕಾಯ್ದೆ ಮತ್ತು ನಿಯಮಗಳಿಗನುಗುಣವಾಗಿ ಹೆಚ್ಚಿನ ಷರತ್ತುಗಳನ್ನು ವಿಧಿಸುವ ಅಧಿಕಾರ ಬ್ಯಾಂಕಿನ ಆಡಳಿತ ಮಂಡಲಿಗೆ ಇರುತ್ತದೆ. 10)ಈ ನೇಮಕಾತಿ ಪ್ರಕ್ರಿಯೆಯು ಬ್ಯಾಂಕಿನ ಸೇವಾ ನಿಯಮಗಳಿಗನುಗುಣವಾಗಿ ನಡೆಯುತ್ತದೆ. |

**ಸಹಿ/-**

**ಅಧ್ಯಕ್ಷರು ಮತ್ತು ಉಪಾಧ್ಯಕ್ಷರು**
**ಆಡಳಿತ ಮಂಡಲಿ ಪರವಾಗಿ**